ಕೂಚಿಪುಡಿ ನೃತ್ಯಕ್ಕೆ ಸೀಮಿತವಾಗದೇ, ಇತರ ಕಲಾಪ್ರಕಾರಗಳ ಕಲಿಕೆ, ಅರಿವು, ಯೋಗ, ಸಂಸ್ಕೃತ ಭಾಷೆಯ ಕಾವ್ಯಗಳನ್ನು ಅರ್ಥಮಾಡಿಕೊಳ್ಳುವ ಬಗೆ, ಸಂಗೀತ, ಮುಂತಾದ ಪೂರಕ ವಿಚಾರಗಳನ್ನು ಕಲಿಯುವುದಕ್ಕೆ ವೇದಿಕೆಯಾಗಿದೆ.

**◆ ನಿಮ್ಮ ಎರಡನೇ ಪತ್ನಿ ಕೌಸಲ್ಯಾ ಅವರ ಬಗ್ಗೆ ಹೇಳುವಿರಾ?**

ರಾಧಾಳ ತಂಗಿ ಕೌಸಲ್ಯಾ. ನಾವು ಹೈದರಾಬಾದ್‌ನಿಂದ ದೆಹಲಿಗೆ ಹೋಗಿ ನೆಲೆಸಿದಾಗ, ಕೌಸಲ್ಯಾ ಪುಟ್ಟ ಹುಡುಗಿ. ಆಗೀಗ ನಮ್ಮೊಡನೆಯೇ ಇರುತ್ತಿದ್ದಳು. ಅಕ್ಕ-ತಂಗಿ ಬಹಳ ಅನ್ಯೋನ್ಯವಾಗಿದ್ದರು. ನಾವು ಆಯ್ಕೆ ಮಾಡಿಕೊಂಡ ನೃತ್ಯ ಕ್ಷೇತ್ರದ ಯಶಸ್ಸು, ಸಾಧನೆಯನ್ನು ಕಂಡು ಅವಳೂ ನೃತ್ಯ ಕಲಿಯಲು ಶುರು ಮಾಡಿದಳು. ನಟುವಾಂಗದಲ್ಲಿ ಅವಳು ಪ್ರವೀಣೆ. ಒಮ್ಮೆ ಆಗ್ನೇಯ ಏಷ್ಯಾ ಪ್ರವಾಸಕ್ಕೆ ಹೊರಡಬೇಕಾದ ಸಂದರ್ಭದಲ್ಲಿ ಹಿಮ್ಮೇಳನದವರು ತಮಗೆ ಬರಲಾಗುವುದಿಲ್ಲ ಎಂದರು. ಆಗ ಕೌಸಲ್ಯಾಳೇ ಮುಂದೆ ನಿಂತು ನಟುವಾಂಗ ನಿರ್ವಹಿಸಿದಳು. ಅವಳ ಸಾಮರ್ಥ್ಯ ಆಗಲೇ ನನ್ನ ಅರಿವಿಗೆ ಬಂದದ್ದು. ಅವಳು ನನ್ನನ್ನು ಪ್ರೀತಿಸುತ್ತಿರುವ ವಿಷಯ ಕೆಲವು ಸಮಯದಲ್ಲಿ ನನ್ನ ಅರಿವಿಗೆ ಬಂತು. ರೆಡ್ಡಿ ಸಮುದಾಯವೆಂದರೆ ಕ್ಷತ್ರಿಯ ಸಮುದಾಯವೆಂದು ಪರಿಗಣಿಸಲಾಗುತ್ತದೆ. ನನ್ನ ಅಜ್ಜನ ತಲೆಮಾರಿನಲ್ಲಿ ಇಬ್ಬರು ಮೂವರು ಪತ್ನಿಯರನ್ನು ಹೊಂದುವುದು ಸಹಜವೇ ಆಗಿತ್ತು. ರಾಧಾ ನನ್ನ ಸೋದರತ್ತೆ ಮಗಳು. ಈ ಸಂಪ್ರದಾಯದ ಬಗ್ಗೆ ಅವಳಿಗೆ ಅರಿವಿತ್ತಾದರೂ, ನಾನು ಕೌಸಲ್ಯಾಳನ್ನು ಮದುವೆಯಾಗಲು ನಿರ್ಧರಿಸಿದಾಗ ಅವಳಿಗೆ ತುಂಬಾ ಬೇಸರವಾಯಿತು. ಕೌಸಲ್ಯಾ ಬೇರೆ ಯಾರನ್ನೂ ಮದುವೆಯಾಗಲು ಸಿದ್ಧಳಿರಲಿಲ್ಲ. ಕೊನೆಗೆ ರಾಧಾ ಒಂದು ನಿರ್ಧಾರಕ್ಕೆ ಬಂದಳು. ಸ್ವಂತ ತಂಗಿಯ ಬಾಳನ್ನೂ ಅಕೆ ನೇರ್ಪು ಮಾಡಬೇಕಿತ್ತು. 'ನನ್ನ ಪತಿಯ ಜೊತೆ ಮದುವೆಯಾಗು. ಆದರೆ ನಾಟ್ಯ ವೇದಿಕೆಯಲ್ಲಿ ನನ್ನ ಪತಿಯ ಜೊತೆ ನರ್ತಿಸುವುದಿಲ್ಲ ಎಂದು ಮಾತು ಕೊಡು' ಎಂದು ಕೌಸಲ್ಯಾಳ ಜೊತೆ ಕೇಳಿದಳು. ಕೌಸಲ್ಯಾ ಅದಕ್ಕೆ ಒಪ್ಪಿಗೆ ಸೂಚಿಸಿ ನನ್ನನ್ನು ಮದುವೆಯಾದಳು. ಅವಳು ವ್ಯವಹಾರ ಚತುರೆ. ನಮ್ಮ ನಾಟ್ಯಶಾಲೆಯ ಕಾರ್ಯಕಲಾಪಗಳನ್ನು ನಿಭಾಯಿಸುತ್ತಾಳೆ. ನನ್ನ ವಸ್ತ್ರಾಭರಣದ ಶೈಲಿಯನ್ನು ಬದಲಾಯಿಸಿದಳು. ನಾವು ಇದ್ದಂತೆಯೇ ಕಾಣಿಸಿಕೊಳ್ಳಬೇಕು ಎನ್ನುತ್ತಾ ಮೇಕಪ್‌ನ ಪ್ರಮಾಣ ಕಡಿಮೆ ಮಾಡಿದಳು. ನೃತ್ಯವಷ್ಟೇ ಅಲ್ಲ, ನೃತ್ಯಕ್ಕೆ ಸಂಬಂಧಿಸಿದ ವಿವಿಧ ಆಯಾಮಗಳನ್ನು ಗಮನಿಸಿಕೊಂಡು ಕೂಚಿಪುಡಿ ಶೈಲಿಯನ್ನು ಇನ್ನಷ್ಟು ಅಪ್‌ಡೇಟ್ ಮಾಡುವಲ್ಲಿ ಕೌಸಲ್ಯಾಳ ಪಾತ್ರ ಬಹಳ ದೊಡ್ಡದಿದೆ. ನಮ್ಮ ಸಂಬಂಧಗಳ ಬಗ್ಗೆ ಅನೇಕರಿಗೆ ಕುತೂಹಲವಿದೆ. ಆದರೆ ಎಲ್ಲ ದಾಂಪತ್ಯದಂತೆ ನಮ್ಮಲ್ಲಿಯೂ ಕಲಹಗಳಿವೆ. ಅದನ್ನು ಮೀರಿ ರಿಹರ್ಸಲ್ ಕೊಠಡಿಗೆ ಹೋದಾಗ ನಾವು ನೃತ್ಯದೇವತೆಯ ಮುಂದಿರುವ ಮಕ್ಕಳು. ನೃತ್ಯಕ್ಕಷ್ಟೇ ಬದ್ಧರಾಗಿ ದುಡಿಯುತ್ತೇವೆ.

**◆ ಹೊಸಬರ ಕಲಿಕೆಯಲ್ಲಿ ಹಿಂದಿನಂತೆ ಈಗಲೂ ಬದ್ಧತೆ ಉಳಿದುಕೊಂಡಿದೆಯಾ?**

ಹಿಂದಿನವರಿಗಿಂತ ಹೆಚ್ಚಿನ ಬದ್ಧತೆಯಿಂದ ಹೊಸಬರು ಕಲಿಯುತ್ತಿದ್ದಾರೆ. ನಾವು ಬದುಕಿನಲ್ಲಿ ಬೇರೆ ಯಾವುದೇ ವಿಚಾರಗಳ ಹಂಗಿಲ್ಲದೆ ಕೇವಲ ನೃತ್ಯವನ್ನು ಕಲಿತೆವು. ಯಶಸ್ಸು ಎಂಬುದು ದೊರೆಯುತ್ತದೆ ಎನ್ನುವ ಖಾತರಿಯೂ ಇಲ್ಲದೆ ಈ ಕ್ಷೇತ್ರಕ್ಕೆ ಧುಮುಕಿದೆವು. ಈಗಿನ ಯುವಜನರು, ಸಾಕಷ್ಟು ಯೋಚಿಸಿ ಅಡಿಯಿಡುತ್ತಾರೆ. ಅತ್ತ ತಮ್ಮ ವೃತ್ತಿ ಬದುಕಿನ ಭದ್ರತೆಯನ್ನೂ ಮಾಡಿಕೊಂಡು, ಇತ್ತ ಕಲಾ ಸಾಧನೆಯನ್ನೂ ಮಾಡುವ ನೂರಾರು ವಿದ್ಯಾರ್ಥಿಗಳು ನಮ್ಮಲ್ಲಿದ್ದಾರೆ. ಕಲಾವಿದರಾಗಿ, ರಸಿಕರಾಗಿ ಅವರು ರೂಪುಗೊಳ್ಳುವ ಬಗೆಯನ್ನು ಕಂಡು ನಾನು ಆನಂದಿಸಿದ್ದೇನೆ. ಅವರಿಗೆ ನಾನೊಂದು ಕಿವಿಮಾತು ಹೇಳುವುದಾದರೆ, 'ನೀವು ಏನನ್ನೇ ಕಲಿತರೂ ಅದರ ಪೂರ್ವಾಪರ ತಿಳಿದುಕೊಂಡು ಕಲಿಯಿರಿ. ನೃತ್ಯವನ್ನು ಕಲಿತು ಓಡಿಬಿಡುವುದು ಸುಲಭದ ಮಾತು. ಇದರ ಹಿನ್ನೆಲೆ, ನಮ್ಮ ದೇಶದ ಹಿನ್ನೆಲೆ, ಪರಂಪರೆಯು ಸಾಗಿ ಬಂದ ದಾರಿಯನ್ನೂ ತಿಳಿದುಕೊಳ್ಳಲು ಮರೆಯಬೇಡಿ. ಆಗ ನೀವು ಕಲಿತ ಕಲಾಪ್ರಕಾರದ ಬಗ್ಗೆ ನಿಮಗೇ ಹೆಮ್ಮೆಯೆನಿಸುತ್ತದೆ.'

●